ಬೆಲೆ:— ನಾಲ್ಕಾಣೆ.

ಕೆಸರಿನ ಕಮಲ

ಕೃತಿಕರ್ತೆ ಮತ್ತು ಪ್ರಕಾಶಿಕೆ,
ಲಕ್ಷ್ಮಿ ಪಾರೆ,
ಸುಳ್ಯ, ದಕ್ಷಿಣ ಕನ್ನಡ.

ಮುದ್ರಣಗಾರರು:
ಯುನಿವರ್ಸಲ್ ಪ್ರಿಂಟರ್ಸ್ ಎಂಡ್ ಪಬ್ಲಿಷರ್ಸ್ ಲಿಮಿಟೆಡ್.
ಬಂದರ, ಮಂಗಳೂರು.

ಅಗಲಿದ ಅತ್ತೆಮ್ಮನವರ

ಪವಿತ್ರ ಗುಣಕ್ಕೆ—

ಮುನ್ನುಡಿ.

ಸಂಸಾರದ ಒಲವನ್ನು, ಪ್ರಕೃತಿಯ ಚೆಲುವನ್ನು ಕಂಡಾಗ ಹೃದಯದಲ್ಲಿ ಭಾವನೆಗಳು ಏಳುವುದು ಸಹಜ. ಆ ಭಾವನೆಗಳನ್ನು ಹಾಡಿನ ರೂಪದಲ್ಲಿ ಇಲ್ಲಿ ಕೊಟ್ಟಿರುವೆನು. ಇದು ಮೊದಲ ಪ್ರಯತ್ನ; ಆದುದರಿಂದ ತಪ್ಪುಗಳಿರಬಹುದು. ಆದರೆ ರಾಘವಾಂಕ ಹೇಳಿದಂತೆ 'ನಡೆವರೆಡಹದೆ ಕುಳಿತರೆಡಹುವರೆ?' ಈ ಸಾಹಸಕ್ಕೆ ಹೀಗಾಗಿಯೇ ಕೈಯಿಕ್ಕಿದ್ದೇನೆ.

ಇವುಗಳನ್ನು ರಚಿಸುವುದೇ ನನಗೊಂದು ಸಂತೋಷವಾಗಿತ್ತು. ಅವುಗಳನ್ನು ಇನ್ನೊಮ್ಮೆ ಮೆಲುಕು ಹಾಕುವಾಗಲೂ ನನಗೆ ಸಂತೋಷವಾಗುವುದು. ಆದರೆ ನನಗೆ ರುಚಿಯಾದುದು ಎಲ್ಲರಿಗೂ ರುಚಿಸೀತೆಂದು ವಾದಿಸಲಾರೆ. ಆದರೂ ನೊಂದ ಜೀವಕ್ಕೆ ತುಸು ಸಂತೋಷವನ್ನೂ ಸಂಸ್ಕಾರವನ್ನೂ ಈ ಹಾಡುಗಳು ಕೊಡಬಲ್ಲವಾದರೆ ನಾನು ಧನ್ಯಳೆನಿಸುವೆನು.

ಈ ಸಲ ಒಂದು ಚಿಕ್ಕ ಪುಸ್ತಕವನ್ನು ಪ್ರಕಟಿಸಿರುವೆನು. ವಾಚಕವೃಂದದ ಪ್ರೋತ್ಸಾಹ ದೊರಕಿದರೆ ಈ ಸೇವೆಯನ್ನು ಮುಂದುವರಿಸುವ ಹಂಬಲವಿದೆ. ಆ ಪ್ರೋತ್ಸಾಹ ಈ ಹಾಡುಗಳ ಉತ್ಕೃಷ್ಟತೆಯ ಮಟ್ಟವನ್ನು ಹೊಂದಿಕೊಂಡಿದೆಯಷ್ಟೆ. ಅದನ್ನು ನಿರ್ಧರಿಸುವುದು ವಾಚಕರ ಹೊಣೆ.

ಸುಂದರವಾದ ಮುಖಚಿತ್ರವನ್ನು ಬರೆದುಕೊಟ್ಟು ಸಹಕರಿಸಿದ ಗೆಳೆಯ **ಶ್ರೀ ಯನ್. ನಾರಾಯಣರಿಗೂ**, ಅಂದವಾಗಿ ಮುದ್ರಿಸಿಕೊಟ್ಟ **ಯುನಿವರ್ಸಲ್ ಪ್ರಿಂಟರ್ಸ್ ಎಂಡ್ ಪಬ್ಲಿಷರ್ಸ್, ಲಿಮಿಟೆಡ್, ಬಂದರ, ಮಂಗಳೂರು,** ಇದರ ಮೆನೇಜರರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳು.

ಮೇ, **1952**. **ಲಕ್ಷ್ಮಿ ಪಾರೆ.**

ಅನುಕ್ರಮಣಿಕೆ.

ಚೆಲುವು ಇರುವಾಗಲೇ ಬಾರದಿಹ ಪ್ರಿಯತಮನು
ಚೆಲುವು ನಶಿಸಿದ ಮೇಲೆ ನೆನೆವುದುಂಟೇ ?
ಆದರೂ ಏತಕೀ ದೃಢಭಕ್ತಿ ಹೃದಯದಲಿ
ಅಲ್ಪ ಹರ್ಷಕೆ ಇನಿತು ಬಳಲ್ವುದುಂಟೆ ?

ಈ ಲೋಕವನು ಮರೆಸಿ ಹೊಸತೊಂದು ರಾಜ್ಯವನು
ಎನ್ನ ಹೃದಯಕೆ ನೀನು ತೋರ್ಪುದೇಕೆ ?
ಈ ಲೋಕಕಿಂತಲೂ ಅಧಿಕ ಸುಖವಿಹುದೇನು
ಅನುಭವಿಸಲೆನ್ನ ಈ ಹೃದಯ ಸಾಕೆ ?

ಮನಸು ನಿನ್ನಲಿ ನಿಂತು ಕರ್ತವ್ಯವನು ಮರೆತು
ಪಾಪಿಯಾದರೆ ಆನು ಮಾಳ್ಪುದೇನು ?
ಕರ್ತವ್ಯ ಭಕ್ತಿ ಎಲ್ಲಾ ಶ್ರೇಷ್ಠ ಕಾರ್ಯಗಳು
ನಿನ್ನ ಸಾಕ್ಷಾತ್ಕಾರಕೆಂಬೆಯೇನು ?

ಮುಗುಳುನಗೆಯರಳಿಸುತ ಕಡೆಗಣ್ಣ ನೋಟದಲಿ
ಪ್ರೇಯಸಿಯು ಪ್ರಿಯತಮನ ಸೆಳೆಯುವಂತೆ
ಎನ್ನ ಮನವನು ಸೆಳೆದೆ ತತ್ತ್ವವೊಂದನು ನುಡಿದೆ
ಪರಮಾತ್ಮನಂಶವಾಗಿಯೆ ನಿಂತೆಯಲ್ತೆ

ಮನವು ಬರಿದಾಗಿರಲಿ ಚಿಂತೆ ಆವರಿಸಿರಲಿ
ನಿನ್ನ ನೋಡಲು ಚಿತ್ತ ಸೊಗಸಪ್ಪುದು
ಏಕಾಂತದೊಳು ಪರಮ ಸುಖವ ಹೊಂದುತ ಮತ್ತೆ
ಇಂಥದೇ ಹಾಡು ಹೊರಹೊಮ್ಮುತಿಹುದು

ಅಲ್ಪವೇ ಆಯುಷ್ಯವೆಂದು ದುಃಖಿಸಬೇಡ
ನಿನ್ನಂಥ ಲೋಕೋಪಕಾರಿಯಿಲ್ಲ
ಬಿರುಗಾಳಿಯೆದುರಿಗೂ ಧೈರ್ಯದಲಿ ನಗುನಗುತ
ಸೊಗಸಾದ ಹಾಡುಗಳನೊರೆವೆಯಲ್ಲ

ಬೇರೆಯಾರೂ ನಿನ್ನ ಕಂಡಿಲ್ಲವೆಂದು ನೀ
ಮಾನಸಿಕ ವೇದನೆಯ ಹೊಂದಬೇಡ
ಜೀವನದ ಕಷ್ಟದಲಿ ಬಳಲಿ ಬೆಂಡಾದವರು
ಶಾಂತಿಹೊಂದುವರು ನಿನ್ನಲ್ಲಿ ನೋಡಾ

ಮನ್ನಿಸೆನ್ನಪರಾಧವನು ಎಂದೊಕಂಡರೂ
ಮನದೊಳು ವಿವೇಚಿಸದೆ ಮೂರ್ಖನಾದೆ
ನೀನೆಬಂದೆನ್ನ ಎಚ್ಚರಿಸಿದಾ ಮೇಲೆ ಕೈ
ಮುಗಿದು ತೋಷದಿ ಹಾಡಿ ಧನ್ಯನಾದೆ.

೪. ಹೂ ಮೋಡ.

ಮಧ್ಯಾಹ್ನದ ಉರಿಬಿಸಿಲಲಿ ಎತ್ತರದಾಕಾಶ
ಹೂಮೋಡವ ಹೊತ್ತಿರಲೆನಗದುವೇತೋಷ
ಭಯವಿಲ್ಲದೆ ಮೆಲುಮೆಲ್ಲನೆ ಚೆಲುನಡಿಗೆಯ ತಳೆದು
ಸಾಗುವುದೆಲ್ಲಿರುವಂತಹ ರಸಋುಷಿಯನು ಒಲಿದು ?
ಸೌಂದರ್ಯವೆ ಬಾ ಎನ್ನಯ ಹೃದಯದಿನೆಲೆಸು
ಮನಸಿನ ತಲ್ಲೀನತೆಯನು ಸುಸ್ಥಿರಗೊಳಿಸು.

೫. ತಳುವ ಬೇಡ.

ತೆಂಗಾಳಿ ಬೀಸುತಿದೆ ಮಲ್ಲಿಗೆಯ ತೋಟದಲಿ
ಮೊಗ್ಗೆಗಳು ನಾಚುತ್ತ ಬಳುಕುತ್ತಿವೆ.
ಹೃದಯ ವಿಕಸನ ಹೊಂದಿ ಸುಖಿಯಾಗೆಲೈರಸಿಕ
ಇದು ಸಮಯ ಇದೆ ಸಮಯ ತಳುವ ಬೇಡ.

೬. ಸ್ನೇಹ.

ಸರ್ವದಾ ನಗುನಗುತ ಸಂತಸವ ನೀಡುತಿರು
ಎನ್ನ ಧ್ಯೇಯಕೆ ಸದಾ ಅಮೃತವನ್ನೆರೆಯುತಿರು
ಜೀವನಕೆ ನಿನ್ನ ನಗೆ ಸ್ಫೂರ್ತಿದಾಯಕವಿರಲಿ
ನಿನ್ನ ಸಾನಿಧ್ಯಸುಖ ನೈರ್ಮಲ್ಯವನೆ ತರಲಿ
ಪುಣ್ಯತೀರ್ಥದಿ ಭಕ್ತಿಯಿಂದ ಮುಳುಗುವ ತೆರದಿ
ನಿನ್ನ ಸ್ನೇಹದಿ ಎನ್ನ ಹೃದಯ ಪುಲಕಿತವಾಗಿ
ಅನುಭವಿಸುತಿಹೆನಮಿತದಾನಂದ ರಾಶಿಯಂ.

೭. ಅರಳು.

ಜಗದ ನೂರಾರು ಕೀರ್ತಿಗಳಿಡೆಯೊಳೆನ್ನ ಕಿಡಿ
ಅರೆಚಣದಿ ಮರೆಯಾದರೇನು ಮುಗುದೆ ?
ಎನ್ನ ಅಭಿವೃದ್ಧಿಯನು ಕಂಡು ನೆಗೆಯೆರಳಿಸಿದ
ಚಿರತೋಷ ಹೃದಯವನು ಅಗಲಲಿಹುದೆ ?
ಅದೆ ಸಾಕು; ಅದಕಾಗಿ ದುಡಿಯುವೆನು ಎಲೆ ಹೂವೆ !
ಅದರಿಂದ ಜೀವನವು ಸೊಗಸಾಗದೆ ?
ಅರಳುತಿರು; ದುಡಿಯುವೆನು. ಕೈ ನೀಡು; ತಬ್ಬುವೆನು.
ಮೂಸಿ ತನ್ಮಯ ಹೃದಯ ತೋಯದಿಹುದೆ ?

೮. ತದಿಗೆ ಚಂದಿರ.

ತದಿಗೆ ಚಂದ್ರನ ಕಂಡು ನಲಿದಾಡದವರಾರು ?
ಮುದವ ಮನಸಿಗೆ ಕೊಡುವ ಮಗುವೆ ಮೈದೋರು.
ಪೂರ್ಣ ಚಂದಿರನಂತೆ ಕಲೆಯ ನೀ ಹೊಂದಿಲ್ಲ;
ಪೂರ್ಣತೆಯ ಹೊಂದಿಹೆನು ಎಂಬ ಹೆಮ್ಮೆಯೆ ಇಲ್ಲ.

ಮುದ್ದು ಮಗು ಕುಣಿದಾಡಿ ತಾಯೆಡೆಗೆ ಬರುವಂತೆ,
ಸದ್ದಿರದೆ ಹೃದಯಕ್ಕೆ ಬಂದು ತೊಲಗಿಸು ಚಿಂತೆ.
ಬಳೆದು ದೊಡ್ಡವನಾಗಿ ಬೆಳಕ ಲೋಕಕೆ ಬೀರು;
ನಿನ್ನ ಪ್ರೀತಿಸಿದೆನ್ನ, ಆಗಲೂ ಮರೆಯದಿರು.

೯. ಉಲ್ಲಾಸದಿ ಸವಿಯುತಿದೆ.

ಚಿಕ್ಕ ಹಕ್ಕಿ ರೆಕ್ಕೆಯೆತ್ತಿ
ಮಧುರ ಹೂವಿನೆಸಳ ಮೇಲೆ
ಮಕರಂದವ ಹೀರುತಿದೆ
ಚೆಲುವಿನೆಳೆಯ ನೂಲುತಿದೆ
ಸೊಬಗನುಂಡು ತಣಿಯುತಿದೆ
ಅದರ ಅರ್ಥ ಸಾರುತಿದೆ
ಬೀರುತಿದೆ ತೋರುತಿದೆ.

ನಲಿಯುತಿದೆ ನಲಿಯುತಿದೆ
ನಲಿನಲಿಯುತ ಒಲಿಯುತಿದೆ
ಸವಿಯುತಿದೆ ಸವಿಯುತಿದೆ
ಉಲ್ಲಾಸದಿ ಸವಿಯುತಿದೆ.

೧೦. ಹುಣ್ಣಿಮೆಯ ಇರುಳು.

ಮಳೆಗಾಲದ ಮೊದಲಲಿ ಮಂದಾರದ
ನಸು ಹಸುರೆಲೆಗಳ ಎಡೆಯೆಡೆಯಿಂದಲಿ
ಕಡು ಚೆಲುವನು ರಸಜೀವಿಗೆ ಉಣ್ಣಿಸಿ
ಮೆರೆಯುವ ಹೂವುಗಳೋ ಎಂಬಂತಿರೆ

ಹುಣ್ಣಿಮೆಯಿರುಳಿನ ಮೊದಲಿನ ಝಾವದಿ
ಚಂದ್ರ ಕಿರಣಗಳು ಬುವಿಯೆಡೆಯೆಡೆಯಲಿ
ಪಸರಿಸಿ ಕವಿಯನು ಹುಚ್ಚಾಗಿಸುತಿವೆ.

ಗಿಡಮರ ಬಳ್ಳಿಗಳನು ತಂಗಾಳಿಯು
ಅನಂತ ಶಾಂತಿಯ ಪ್ರೇಮದಿ ತಬ್ಬಿದೆ
ಭೂಮಿಯ ಚೆಲುವಾಕಾಶದ ಘನತೆಯ
ಚುಂಬಿಸಿ ಹೃದಯಕೆ ಭಾವವ ತುಂಬಿಸಿ
ಮೆರೆಯುತ್ತಿದೆ ಮನ ಮೋಹಕ ಪ್ರಕೃತಿಯು
ಕವಿಗುರುವಿನ ಉತ್ಕೃಷ್ಟದ ಸುಕೃತಿಯು
ಎನುವಂತಿದೆ ನಿಂತಿದನನುಭವಿಸು.

೧೧. ಹಕ್ಕಿ.

ನಿನ್ನಂತೆ ಜೀವನಕೆ ಸ್ವಾತಂತ್ರ್ಯವಿರಬೇಕು
ಎನಿಸುತಿದೆ ಓ ಹಕ್ಕಿ ನಿನ್ನ ನೋಡಿ.
ದುಃಖಸಂಕಟಗಳನು ಧಿಕ್ಕರಿಸಿ ವಿಹರಿಸುವೆ
ಸಂತಸದಿ ಗಗನದಲಿ ನಲಿದು ಆಡಿ

ಅಲ್ಲಿಂದ ನೋಡುತಿಹೆ ಕೆಳಗೆ ಈ ಲೋಕವನು
ನೋಡುತ್ತ ನೋಡುತ್ತ ಮೇಲೇರುವೆ
ನನ್ನನೂ ಕರೆದೊಯ್ದು ನೀ ಕಂಡ ಭಾವನೆಯ
ಚೆಲುವ ವಿವರಿಸೂ ನಿನಗೆ ಕೆಯ್ಯ ಮುಗಿವೆ.

ಭಾವನೆಗೆ ನಿನ್ನ ಜೀವನವಿರಲಿ; ಜೀವನಕೆ
ಮಾನವತೆ ಇರಲಿ; ಸೌಂದರ್ಯ ಕಂಡು
ಮೆಚ್ಚುವಂತಹ ಹೃದಯ ಉಭಯತತ್ತ್ವದೊಳಿರಲಿ,
ಚೆಲುವನೆಲ್ಲೆಲ್ಲಿಯೂ ನೋಡಿ ಉಂಡು.

೧೨. ಸುಂದರ ಸಂಜೆ.

ಕವಿಯ ಭಾವನೆಯಂತೆ ಸಂತಸದಿ ತೇಲುತಿದೆ
ದೂರದ ದಿಗಂತದಲಿ ಕೆಂಪು ಮುಗಿಲು
ತಂಗಾಳಿ ಬೀಸುತಿದೆ ಪ್ರಕೃತಿಯ ಚೆಲುವ ಸಾರಿ
ತೀಕ್ಷ್ಣತೆಯ ಕಳೆದಿಹುದು ರವಿಯ ಬಿಸಿಲು

ಹಕ್ಕಿಗಳ ಸಾಲೊಂದು ಕಣ್ಗೆ ಪುಣ್ಯವನಿತ್ತು
ವೈವಿಧ್ಯತೆಯ ಚೆಲುವ ಬೀರುತಿಹುದು.
ಏನನೋ ಹಾಡುತ್ತ ಹಾರುತಿಹ ಜೀವಿಗಳ
ಸಂಸಾರದಾ ಪ್ರೀತಿ ಸೆಳೆಯುತಿಹುದು.

ಅಳಿಲಮರಿಯೊಂದು ಮರದೆಡೆಯಲ್ಲಿ ಚಿಗಿಯುತ್ತ
ಸ್ವಾತಂತ್ರ್ಯ ಸುಖವನನುಭವಿಸುತಿಹುದು.
ಬಾಹ್ಯಕಾರಣವಿರದೆ ಆತ್ಮಸಂತೋಷವನು
ಪಡೆದು ಮನುಜನಿಗಿತ್ತು ನಲಿಯುತಿಹುದು.

ಗೋವುಗಳ ಕಾಲ ಗೊರಸಿಂದೆದ್ದ ಕೆಂಧೂಳು
ಮೇಲೇರಿ ಕಣ್ಮನವ ಸೆಳೆಯುತಿಹುದು.
ಮುದ್ದು ಮಕ್ಕಳ ನೆನೆದು ಗುಂಪು ಹಟ್ಟಿಯ ಕಡೆಗೆ
ವಿಶ್ರಾಂತಿಯನು ಬಯಸಿ ಮರಳುತಿಹುದು.

ಹಸುರು ಬಣ್ಣದ ಸಸ್ಯಗಳು ರವಿಯ ನೋಡುತ್ತ
ಅಗಲಿಕೆಯ ನೋವನ್ನು ಸಹಿಸದಿಹವು.
ಕೆಂಪು ಚಿಗುರುಗಳ ಮುಂದೋರಿ ಮೊರೆಯಿಡುತಿಹವು
ಮೂಡಿಹುದು ಇಲ್ಲಿ ಮೌನದ ದುಃಖವು.

ಈ ರೀತಿ ಹಂಬಲಿಸುತಿಹ ಪ್ರಕೃತಿಯೊಡನೆ ನೀ-
ನೇಕೆ ಅನವರತ ನಿಲಲೊಲ್ಲೆ ರವಿಯೆ ?
ಈ ಎರಡು ಚೆಲುವುಗಳ ಸಂಯೋಗದಲಿ ಮನುಜ
ಸುಖಿಸಿದರೆ ತಪ್ಪೇನು ಹೇಳು ದೊರೆಯೆ !

ಪ್ರಕೃತಿಯನು ದುಃಖದಲಿ ಮುಳುಗಿಸಿದ ಓ ಚೆಲುವೆ !
ಬಾಹ್ಯೇಂದ್ರಿಯಕ್ಕೆ ನೀ ಮಾಯವಾದೆ
ಈ ನಿನ್ನ ನಾಟಕಕೆ ಹೆದರೆ ನಾ; ಎನ್ನ ನೀ
ಮೋಸಗೊಳಿಸಲು ನೀನೆ ಮೋಸಹೋದೆ.

ರಾಧೆ ಹಿಡಿದಾ ಕೆಯ್ಯ ಬಿಡಿಸಿ ಓಡಿದ ಕೃಷ್ಣ
ಅವಳ ಹೃದಯವ ಬಿಟ್ಟು ಓಡಲಿಲ್ಲ !
ಅವಳ ಭಕ್ತಿಯೆ ಅಷ್ಟು; ನನ್ನದು ಕಡಿಮೆಯೇನು ?
ಇನ್ನೊಮ್ಮೆ ದರ್ಶನವ ಕೊಡುವೆಯಲ್ಲ !

೧೩. ಕೃಷ್ಣರಾಜಸಾಗರ.

ವಿರಸ ಜೀವನದಲ್ಲಿ ಮನಸು ತೇಲಾಡುತಿರೆ
ಬಾರೊಮ್ಮೆ ಅಣೆಕಟ್ಟ ಚೆಲುವ ನೋಡು.
ವಿರಸತೆಯ ಕಳೆಯುವುದು ಶಾಶ್ವತದ ರಸಭಾವ-
ವಿತ್ತು ಸಲಹುವುದು ಮನಸೊಮ್ಮೆ ಮಾಡು.

ಜಲದ ತುಂತುರ್ವನಿಗಳಾಡುತಿವೆ ಓಡುತಿವೆ,
ಪುಷ್ಪವೃಷ್ಟಿಯ ಸಗ್ಗಕೇರಿಸುತಿವೆ !
ಹುದುಗಿದ್ದ ಭಾವನೆಯ ಹೊಡೆದೆಬ್ಬಿಸುತ್ತಿಹುದು,
ಮುಗ್ಧ ಸೌಂದರ್ಯ ಚಿಗುರೆಡೆಯ ಹೂವೆ !

ಮಾನವನ ಯತ್ನದೊಳ ತಿರುಳನ್ನು ಸಾರುತ್ತ
ಗಂಭೀರತೆಯನಾಂತು ಅಣೆಕಟ್ಟಿದೆ.
ಅದರ ಮೇಲೇರಿ ಬಾ ಗೆಳತಿ ! ನೋಡೊಮ್ಮೆ ಪಡು
ದಿಕ್ಕಿನಲಿ ಪ್ರಕೃತಿ ಮೌನವನಾಂತಿದೆ.

ಇನಿತು ಚೆಲುವನು ಬಿಟ್ಟು ಎಂತು ಮುಳುಗುವನು ರವಿ !
ಇಣಿಕಿಣಿಕಿ ನೋಡುವನು ತಿರುಗಿ ತಿರುಗಿ
ಅವನ ಆಸೆಯೆ ಇಲ್ಲಿ ಮತ್ತೊಂದು ಚೆಲ್ವಿಕೆಯ
ನಾಂತಿಹುದು ಅನುಭವಿಸು ಅದಕೆ ಎರಗಿ.

ಶ್ರೇಷ್ಠಕವಿಗೊದಗುವಾ ಭಾವನೆಯ ಹೋಲುವುದು
ಸತ್ಯಸ್ವರೂಪ ಶೋಭೆಯನೆ ಹೊಂದಿ.
ಇದುವೆ ಪರಮಾತ್ಮನಾಗಿರೆ ಅಲ್ಲಗಳೆಯುವೆಯ
ಅವನಿರುವಿಕೆಯ ಆತ್ಮಶಕ್ತಿ ಗುಂದಿ ?

ಈ ಚೆಲುವು ಹೃದಯದೊಳಗಿರುವನಕ ಹಾಡುವನು
ಮಾನವನು ಸೌಂದರ್ಯ ಗೀತಗಳನು.
ಹೃದಯದೊಳಹೊಕ್ಕ ಮೇಲದು ಬಿಡದು ಮಾನವನ
ಹಾಡುವನದೆಂತು ದುಃಖದ ಅಳಲನು ?

ಅದರಿಂದ ಶ್ರೇಷ್ಠತಮದಾನಂದ ಬಯಸುವೊಡೆ
ಹೃದಯವನು ತೆರೆದೊಮ್ಮೆ ನಿಂತು ನೋಡು.
ಬೆರಗಿನಲಿ ಮುಗ್ಧನಾಗುತ ಚೆಲುವ ಸೃಷ್ಟಿಸಿದ
ಸೌಂದರ್ಯ ಮೂರುತಿಯ ಹೊಗಳಿ ಹಾಡು.

೧೪. ನನ್ನ ಹೂ.

ಚೆಲುವಿನಲಿ ಶೀಲದಲಿ ನನ್ನ ಮನಸನು ಸೆಳೆದು
ಒಲವು ಹುಟ್ಟಿಸಿದಂಥ ಜಾಣೆ ನೀನು !
ಒಲವಿರಲು ನಿನ್ನಲ್ಲಿ, ನೀನು ಒಪ್ಪಿರುವಲ್ಲಿ
ಸಲಿಗೆ ಬೆಳೆದರೆ ನನ್ನ ನಿನ್ನ ತಪ್ಪೇನು ?

ಚೆಲುವು ಇರುವಾಗಲೇ ಬಾರದಿಹ ಪ್ರಿಯತಮನು
ಚೆಲುವು ನಶಿಸಿದ ಮೇಲೆ ನೆನೆವುದುಂಟೇ ?
ಆದರೂ ಏತಕೀ ದೃಢಭಕ್ತಿ ಹೃದಯದಲಿ
ಅಲ್ಪ ಹರ್ಷಕೆ ಇನಿತು ಬಳಲ್ವುದುಂಟೆ ?

ಈ ಲೋಕವನು ಮರೆಸಿ ಹೊಸತೊಂದು ರಾಜ್ಯವನು
ಎನ್ನ ಹೃದಯಕೆ ನೀನು ತೋರ್ಪುದೇಕೆ ?
ಈ ಲೋಕಕಿಂತಲೂ ಅಧಿಕ ಸುಖವಿಹುದೇನು
ಅನುಭವಿಸಲೆನ್ನ ಈ ಹೃದಯ ಸಾಕೆ ?

ಮನಸು ನಿನ್ನಲಿ ನಿಂತು ಕರ್ತವ್ಯವನು ಮರೆತು
ಪಾಪಿಯಾದರೆ ಆನು ಮಾಳ್ಪುದೇನು ?
ಕರ್ತವ್ಯ ಭಕ್ತಿ ಎಲ್ಲಾ ಶ್ರೇಷ್ಠ ಕಾರ್ಯಗಳು
ನಿನ್ನ ಸಾಕ್ಷಾತ್ಕಾರಕೆಂಬೆಯೇನು ?

ಮುಗುಳುನಗೆಯರಳಿಸುತ ಕಡೆಗಣ್ಣ ನೋಟದಲಿ
ಪ್ರೇಯಸಿಯು ಪ್ರಿಯತಮನ ಸೆಳೆಯುವಂತೆ
ಎನ್ನ ಮನವನು ಸೆಳೆದೆ ತತ್ತ್ವವೊಂದನು ನುಡಿದೆ
ಪರಮಾತ್ಮನಂಶವಾಗಿಯೆ ನಿಂತೆಯಲ್ತೆ

ಮನವು ಬರಿದಾಗಿರಲಿ ಚಿಂತೆ ಆವರಿಸಿರಲಿ
ನಿನ್ನ ನೋಡಲು ಚಿತ್ತ ಸೊಗಸಪ್ಪುದು
ಏಕಾಂತದೊಳು ಪರಮ ಸುಖವ ಹೊಂದುತ ಮತ್ತೆ
ಇಂಥದೇ ಹಾಡು ಹೊರಹೊಮ್ಮುತಿಹುದು

ಅಲ್ಪವೇ ಆಯುಷ್ಯವೆಂದು ದುಃಖಿಸಬೇಡ
ನಿನ್ನಂಥ ಲೋಕೋಪಕಾರಿಯಿಲ್ಲ
ಬಿರುಗಾಳಿಯೆದುರಿಗೂ ಧೈರ್ಯದಲಿ ನಗುನಗುತ
ಸೊಗಸಾದ ಹಾಡುಗಳನೊರೆವೆಯಲ್ಲ

ಬೇರೆಯಾರೂ ನಿನ್ನ ಕಂಡಿಲ್ಲವೆಂದು ನೀ
ಮಾನಸಿಕ ವೇದನೆಯ ಹೊಂದಬೇಡ
ಜೀವನದ ಕಷ್ಟದಲಿ ಬಳಲಿ ಬೆಂಡಾದವರು
ಶಾಂತಿಹೊಂದುವರು ನಿನ್ನಲ್ಲಿ ನೋಡಾ

ಮನ್ನಿಸೆನ್ನಪರಾಧವನು ಎಂದೊಕಂಡರೂ
ಮನದೊಳು ವಿವೇಚಿಸದೆ ಮೂರ್ಖನಾದೆ
ನೀನೆಬಂದೆನ್ನ ಎಚ್ಚರಿಸಿದಾ ಮೇಲೆ ಕೈ
ಮುಗಿದು ತೋಷದಿ ಹಾಡಿ ಧನ್ಯನಾದೆ.

೪. ಹೂ ನೋಡ.

ಮಧ್ಯಾಹ್ನದ ಉರಿಬಿಸಿಲಲಿ ಎತ್ತರದಾಕಾಶ
ಹೂನೋಡವ ಹೊತ್ತಿರಲೆನಗದುವೇತೋಷ
ಭಯವಿಲ್ಲದೆ ಮೆಲುಮೆಲ್ಲನೆ ಚೆಲುನಡಿಗೆಯ ತಳೆದು
ಸಾಗುವುದೆಲ್ಲಿರುವಂತಹ ರಸಋಷಿಯನು ಒಲಿದು ?
ಸೌಂದರ್ಯವೆ ಬಾ ಎನ್ನಯ ಹೃದಯದಿನೆಲೆಸು
ಮನಸಿನ ತಲ್ಲೀನತೆಯನು ಸುಸ್ಥಿರಗೊಳಿಸು.

೫. ತಳುವ ಬೇಡ.

ತೆಂಗಾಳಿ ಬೀಸುತಿದೆ ಮಲ್ಲಿಗೆಯ ತೋಟದಲಿ
ಮೊಗ್ಗೆಗಳು ನಾಚುತ್ತ ಬಳುಕುತ್ತಿವೆ.
ಹೃದಯ ವಿಕಸನ ಹೊಂದಿ ಸುಖಿಯಾಗೆಲೈರಸಿಕ
ಇದು ಸಮಯ ಇದೆ ಸಮಯ ತಳುವ ಬೇಡ.

೭. ಸ್ನೇಹ.

ಸರ್ವದಾ ನಗುನಗುತ ಸಂತಸವ ನೀಡುತಿರು
ಎನ್ನ ಧ್ಯೇಯಕೆ ಸದಾ ಅಮೃತವನ್ನೆರೆಯುತಿರು
ಜೀವನಕೆ ನಿನ್ನ ನಗೆ ಸ್ಫೂರ್ತಿದಾಯಕವಿರಲಿ
ನಿನ್ನ ಸಾನಿಧ್ಯಸುಖ ನೈರ್ಮಲ್ಯವನೆ ತರಲಿ
ಪುಣ್ಯತೀರ್ಥದಿ ಭಕ್ತಿಯಿಂದ ಮುಳುಗುವ ತೆರದಿ
ನಿನ್ನ ಸ್ನೇಹದಿ ಎನ್ನ ಹೃದಯ ಪುಲಕಿತವಾಗಿ
ಅನುಭವಿಸುತಿಹೆನಮಿತದಾನಂದ ರಾಶಿಯಂ.

೭. ಅರಳು.

ಜಗದ ನೂರಾರು ಕೀರ್ತಿಗಳೆಡೆಯೊಳೆನ್ನ ಕಿಡಿ
ಅರೆಚಣದಿ ಮರೆಯಾದರೇನು ಮುಗುದೆ ?
ಎನ್ನ ಅಭಿವೃದ್ಧಿಯನು ಕಂಡು ನಗೆಯರಳಿಸಿದ
ಚಿರತೋಷ ಹೃದಯವನು ಅಗಲಲಿಹುದೆ ?
ಅದೆ ಸಾಕು; ಅದಕಾಗಿ ದುಡಿಯುವೆನು ಎಲೆ ಹೂವೆ !
ಅದರಿಂದ ಜೀವನವು ಸೊಗಸಾಗದೆ ?
ಅರಳುತಿರು; ದುಡಿಯುವೆನು. ಕೈ ನೀಡು; ತಬ್ಬುವೆನು.
ಮೂಸಿ ತನ್ಮಯ ಹೃದಯ ತೋಯದಿಹುದೆ ?

೮. ತದಿಗೆ ಚಂದಿರ.

ತದಿಗೆ ಚಂದ್ರನ ಕಂಡು ನಲಿದಾಡದವರಾರು ?
ಮುದವ ಮನಸಿಗೆ ಕೊಡುವ ಮುಗುಳೆ ಮೈದೋರು.
ಪೂರ್ಣ ಚಂದಿರನಂತೆ ಕಲೆಯು ನೀ ಹೊಂದಿಲ್ಲ;
ಪೂರ್ಣತೆಯ ಹೊಂದಿಹೆನು ಎಂಬ ಹೆಮ್ಮೆಯು ಇಲ್ಲ.

ಮುದ್ದು ಮಗು ಕುಣಿದಾಡಿ ತಾಯೆಡೆಗೆ ಬರುವಂತೆ,
ಸದ್ದಿರದೆ ಹೃದಯಕ್ಕೆ ಬಂದು ತೊಲಗಿಸು ಚಿಂತೆ.
ಬಳೆದು ದೊಡ್ಡವನಾಗಿ ಬೆಳಕ ಲೋಕಕೆ ಬೀರು;
ನಿನ್ನ ಪ್ರೀತಿಸಿದೆನ್ನ, ಆಗಲೂ ಮರೆಯದಿರು.

೯. ಉಲ್ಲಾಸದಿ ಸವಿಯುತಿದೆ.

ಚಿಕ್ಕ ಹಕ್ಕಿ ರೆಕ್ಕೆಯೆತ್ತಿ
ಮಧುರ ಹೂವಿನೆಸಳ ಮೇಲೆ
ಮಕರಂದವ ಹೀರುತಿದೆ
ಚೆಲುವಿನೆಳೆಯ ನೂಲುತಿದೆ
ಸೊಬಗನುಂಡು ತಣಿಯುತಿದೆ
ಅದರ ಅರ್ಥ ಸಾರುತಿದೆ
ಬೀರುತಿದೆ ತೋರುತಿದೆ.

ನಲಿಯುತಿದೆ ನಲಿಯುತಿದೆ
ನಲಿನಲಿಯುತ ಒಲಿಯುತಿದೆ
ಸವಿಯುತಿದೆ ಸವಿಯುತಿದೆ
ಉಲ್ಲಾಸದಿ ಸವಿಯುತಿದೆ.

೧೦. ಹುಣ್ಣಿಮೆಯ ಇರುಳು.

ಮಳೆಗಾಲದ ಮೊದಲಲಿ ಮಂದಾರದ
ನಸು ಹಸುರೆಲೆಗಳ ಎಡೆಯೆಡೆಯಿಂದಲಿ
ಕಡು ಚೆಲುವನು ರಸಜೀವಿಗೆ ಉಣ್ಣಿಸಿ
ಮೆರೆಯುವ ಹೂವುಗಳೋ ಎಂಬಂತಿರೆ

ಹುಣ್ಣಿಮೆಯಿರುಳಿನ ಮೊದಲಿನ ಝಾವದಿ
ಚಂದ್ರ ಕಿರಣಗಳು ಬುವಿಯೆಡೆಯೆಡೆಯಲಿ
ಪಸರಿಸಿ ಕವಿಯನು ಹುಚ್ಚಾಗಿಸುತಿವೆ.

ಗಿಡಮರ ಬಳ್ಳಿಗಳನು ತಂಗಾಳಿಯು
ಅನಂತ ಶಾಂತಿಯ ಪ್ರೇಮದಿ ತಬ್ಬಿದೆ
ಭೂಮಿಯ ಚೆಲುವಾಕಾಶದ ಘನತೆಯ
ಚುಂಬಿಸಿ ಹೃದಯಕೆ ಭಾವವ ತುಂಬಿಸಿ
ಮೆರೆಯುತ್ತಿದೆ ಮನ ಮೋಹಕ ಪ್ರಕೃತಿಯು
ಕವಿಗುರುವಿನ ಉತ್ಕೃಷ್ಟದ ಸುಕೃತಿಯು
ಎನುವಂತಿದೆ ನಿಂತಿದನನುಭವಿಸು.

೧೧. ಹಕ್ಕಿ.

ನಿನ್ನಂತೆ ಜೀವನಕೆ ಸ್ವಾತಂತ್ರ್ಯವಿರಬೇಕು
ಎನಿಸುತಿದೆ ಓ ಹಕ್ಕಿ ನಿನ್ನ ನೋಡಿ.
ದುಃಖಸಂಕಟಗಳನು ಧಿಕ್ಕರಿಸಿ ವಿಹರಿಸುವೆ
ಸಂತಸದಿ ಗಗನದಲಿ ನಲಿದು ಆಡಿ

ಅಲ್ಲಿಂದ ನೋಡುತಿಹೆ ಕೆಳಗೆ ಈ ಲೋಕವನು
ನೋಡುತ್ತ ನೋಡುತ್ತ ಮೇಲೇರುವೆ
ನನ್ನನೂ ಕರೆದೊಯ್ದು ನೀ ಕಂಡ ಭಾವನೆಯ
ಚೆಲುವ ವಿವರಿಸು ನಿನಗೆ ಕೆಯ್ಯ ಮುಗಿವೆ.

ಭಾವನೆಗೆ ನಿನ್ನ ಜೀವನವಿರಲಿ; ಜೀವನಕೆ
ಮಾನವತೆ ಇರಲಿ; ಸೌಂದರ್ಯ ಕಂಡು
ಮೆಚ್ಚುವಂತಹ ಹೃದಯ ಉಭಯತತ್ತ್ವದೊಳಿರಲಿ,
ಚೆಲುವನೆಲ್ಲೆಲ್ಲಿಯೂ ನೋಡಿ ಉಂಡು.

....

೧೨. ಸುಂದರ ಸಂಜೆ.

ಕವಿಯ ಭಾವನೆಯಂತೆ ಸಂತಸದಿ ತೇಲುತಿದೆ
ದೂರದ ದಿಗಂತದಲಿ ಕೆಂಪು ಮುಗಿಲು
ತಂಗಾಳಿ ಬೀಸುತಿದೆ ಪ್ರಕೃತಿಯ ಚೆಲುವ ಸಾರಿ
ತೀಕ್ಷ್ಣತೆಯ ಕಳೆದಿಹುದು ರವಿಯು ಬಿಸಿಲು

ಹಕ್ಕಿಗಳ ಸಾಲೊಂದು ಕಣ್ಗೆ ಪುಣ್ಯವನಿತ್ತು
ವೈವಿಧ್ಯತೆಯ ಚೆಲುವ ಬೀರುತಿಹುದು.
ಏನನೋ ಹಾಡುತ್ತ ಹಾರುತಿಹ ಜೀವಿಗಳ
ಸಂಸಾರದಾ ಪ್ರೀತಿ ಸೆಳೆಯುತಿಹುದು.

ಅಳಿಲಮರಿಯೊಂದು ಮರದೆಡೆಯಲ್ಲಿ ಚಿಗಿಯುತ್ತ
ಸ್ವಾತಂತ್ರ್ಯ ಸುಖವನನುಭವಿಸುತಿಹುದು.
ಬಾಹ್ಯಕಾರಣವಿರದೆ ಆತ್ಮ ಸಂತೋಷವನು
ಪಡೆದು ಮನುಜನಿಗಿತ್ತು ನಲಿಯುತಿಹುದು.

ಗೋವುಗಳ ಕಾಲ ಗೊರಸಿಂದೆದ್ದ ಕೆಂಧೂಳು
ಮೇಲೇರಿ ಕಣ್ಮನವ ಸೆಳೆಯುತಿಹುದು.
ಮುದ್ದು ಮಕ್ಕಳ ನೆನೆದು ಗುಂಪು ಹಟ್ಟಿಯ ಕಡೆಗೆ
ವಿಶ್ರಾಂತಿಯನು ಬಯಸಿ ಮರಳುತಿಹುದು.

ಹಸುರು ಬಣ್ಣದ ಸಸ್ಯಗಳು ರವಿಯ ನೋಡುತ್ತ
ಅಗಲಿಕೆಯ ನೋವನ್ನು ಸಹಿಸದಿಹವು.
ಕೆಂಪು ಚಿಗುರುಗಳ ಮುಂದೋರಿ ಮೊರೆಯಿಡುತಿಹವು
ಮೂಡಿಹುದು ಇಲ್ಲಿ ಮೌನದ ದುಃಖವು.

ಈ ರೀತಿ ಹಂಬಲಿಸುತಿಹ ಪ್ರಕೃತಿಯೊಡನೆ ನೀ-
ನೇಕೆ ಅನವರತ ನಿಲಲೊಲ್ಲೆ ರವಿಯೆ ?
ಈ ಎರಡು ಚೆಲುವುಗಳ ಸಂಯೋಗದಲಿ ಮನುಜ
ಸುಖಿಸಿದರೆ ತಪ್ಪೇನು ಹೇಳು ದೊರೆಯೆ !

ಪ್ರಕೃತಿಯನು ದುಃಖದಲಿ ಮುಳುಗಿಸಿದ ಓ ಚೆಲುವೆ !
ಬಾಹ್ಯೇಂದ್ರಿಯಕ್ಕೆ ನೀ ಮಾಯವಾದೆ
ಈ ನಿನ್ನ ನಾಟಕಕೆ ಹೆದರೆ ನಾ; ಎನ್ನ ನೀ
ಮೋಸಗೊಳಿಸಲು ನೀನೆ ಮೋಸಹೋದೆ.

ರಾಧೆ ಹಿಡಿದಾ ಕೆಯ್ಯ ಬಿಡಿಸಿ ಓಡಿದ ಕೃಷ್ಣ
ಅವಳ ಹೃದಯವ ಬಿಟ್ಟು ಓಡಲಿಲ್ಲ !
ಅವಳ ಭಕ್ತಿಯೆ ಅಷ್ಟು; ನನ್ನದು ಕಡಿಮೆಯೇನು ?
ಇನ್ನೊಮ್ಮೆ ದರ್ಶನವ ಕೊಡುವೆಯಲ್ಲ !

೧೩. ಕೃಷ್ಣರಾಜಸಾಗರ.

ವಿರಸ ಜೀವನದಲ್ಲಿ ಮನಸು ತೇಲಾಡುತಿರೆ
ಬಾರೊಮ್ಮೆ ಅಣೆಕಟ್ಟೆ ಚೆಲುವ ನೋಡು.
ವಿರಸತೆಯ ಕಳೆಯುವುದು ಶಾಶ್ವತದ ರಸಭಾವ-
ವಿತ್ತು ಸಲಹುವುದು ಮನಸೊಮ್ಮೆ ಮಾಡು.

ಜಲದ ತುಂತುರ್ವನಿಗಳಾಡುತಿವೆ ಓಡುತಿವೆ,
ಪುಷ್ಪವೃಷ್ಟಿಯ ಸಗ್ಗಕೇರಿಸುತಿವೆ !
ಹುದುಗಿದ್ದ ಭಾವನೆಯ ಹೊಡೆದೆಬ್ಬಿಸುತ್ತಿಹುದು,
ಮುಗ್ಧ ಸೌಂದರ್ಯ ಚಿಗುರೆಡೆಯ ಹೂವೆ !

ಮಾನವನ ಯತ್ನದೊಳ ತಿರುಳನ್ನು ಸಾರುತ್ತ
ಗಂಭೀರತೆಯನಾಂತು ಅಣೆಕಟ್ಟಿದೆ.
ಅದರ ಮೇಲೇರಿ ಬಾ ಗೆಳತಿ ! ನೋಡೊಮ್ಮೆ ಪಡು
ದಿಕ್ಕಿನಲಿ ಪ್ರಕೃತಿ ಮೌನವನಾಂತಿದೆ.

ಇನಿತು ಚೆಲುವನು ಬಿಟ್ಟು ಎಂತು ಮುಳುಗುವನು ರವಿ !
ಇಣಿಕಿಣಿಕಿ ನೋಡುವನು ತಿರುಗಿ ತಿರುಗಿ
ಅವನ ಆಸೆಯು ಇಲ್ಲಿ ಮತ್ತೊಂದು ಚೆಲ್ವಿಕೆಯು
ನಾಂತಿಹುದು ಅನುಭವಿಸು ಅದಕೆ ಎರಗಿ.

ಶ್ರೇಷ್ಠಕವಿಗೊದಗುವಾ ಭಾವನೆಯ ಹೋಲುವುದು
ಸತ್ಯಸ್ವರೂಪ ಶೋಭೆಯನೆ ಹೊಂದಿ.
ಇದುವೆ ಪರಮಾತ್ಮವಾಗಿರೆ ಅಲ್ಲಗಳೆಯುವೆಯ
ಅವನಿರುವಿಕೆಯ ಆತ್ಮಶಕ್ತಿ ಗುಂದಿ ?

ಈ ಚೆಲುವು ಹೃದಯದೊಳಗಿರುವನಕ ಹಾಡುವನು
ಮಾನವನು ಸೌಂದರ್ಯ ಗೀತಗಳನು.
ಹೃದಯದೊಳಹೊಕ್ಕ ಮೇಲದು ಬಿಡದು ಮಾನವನ
ಹಾಡುವನದೆಂತು ದುಃಖದ ಅಳಲನು ?

ಅದರಿಂದ ಶ್ರೇಷ್ಠತಮುದಾನಂದ ಬಯಸುವೊಡೆ
ಹೃದಯವನು ತೆರೆದೊಮ್ಮೆ ನಿಂತು ನೋಡು.
ಬೆರಗಿನಲಿ ಮುಗ್ಧನಾಗುತ ಚೆಲುವ ಸೃಷ್ಟಿಸಿದ
ಸೌಂದರ್ಯ ಮೂರುತಿಯ ಹೊಗಳಿ ಹಾಡು.

೧೪. ನನ್ನ ಹೂ.

ಚೆಲುವಿನಲಿ ಶೀಲದಲಿ ನನ್ನ ಮನಸನು ಸೇದು
ಒಲವು ಹುಟ್ಟಿಸಿದಂಥ ಜಾಣೆ ನೀನು !
ಒಲವಿರಲು ನಿನ್ನಲ್ಲಿ, ನೀನು ಒಪ್ಪಿರುವಲ್ಲಿ
ಸಲಿಗೆ ಬೆಳೆದರೆ ನನ್ನ ನಿನ್ನ ತಪ್ಪೇನು ?

ಮಲ್ಲಿಗೆಯ ತೋಟದಲಿ ಮೊಗ್ಗೆ ಅರಳಿದ ಹಾಗೆ
ನಾಚಿ ನಗುತಿರುವೆ ನೀನೆನ್ನ ನೋಡಿ !
ನಿನ್ನ ಈ ಮುದ್ದು ಮುಖದಲಿ ನಗೆಯಿರಲಿ ಸತತ;
ಜೀವಿಸುವ ನಾವಿಂತು ಹಾಡಿ ಹಾಡಿ.

ಕೊಂಡಾಟದಿಂದ ಬಹು ಪ್ರೀತಿಯಿಂದಿರಬೇಕು
ನಾವಿಬ್ಬರೂ ಸತತ ನಗುನಗುತಲಿ,
ಹೂವಿಗಿಂತಲು ಹೆಚ್ಚು ಪರಿಮಳವೆ ಇರಬೇಕು
ನಮ್ಮ ಬಾಳುವೆ ನೋಡು ಮುದ್ದು ಲಿಲ್ಲೀ.

ನಿನಗಾಗಿ ಪ್ರೀತಿಯಲಿ ರಚಿಸಿರುವೆನೀ ಕವಿತೆ
ಸ್ವೀಕರಿಸು ದಯವಿಟ್ಟು ನನ್ನ ಚೆಲುವೆ
ಆ ಮೇಲೆ ನಾಚಿ ಸಂತೋಷದಲಿ ಕೋಗಿಲೆಯ
ಕಂಠದಲಿ ಹಾಡಿದರೆ ಹೂವನೀವೆ.

೧೫. ಕರ್ಮರಹಸ್ಯ.

ಕರ್ತವ್ಯ ಪಥದಲ್ಲಿ ಹೆಜ್ಜೆಗಳನಿಡುವಾಗ
ಪೊಳ್ಳು ಬೆದರಿಕೆಗಳುಕಿ ನಿಲ್ಲಬೇಡ.
ಬಾಹ್ಯಕಾರಣಗಳನು ಹುಡುಕುತ್ತ ತಲೆಕೆಡಿಸಿ
ಕೊಂಡು ಮರುಳಾಗದಿರು ಓ ಕಾರ್ಮಿಕ.
ಅಂತರಾತ್ಮನ ಕೂಡೆ ಆಲೋಚಿಸಿದ ಮೇಲೆ
ತಡವೇಕೆ ಕರ್ಮಭೂಮಿಗೆ ಧುಮುಕಲು ?
ಹಳಿವವರು ಹಳಿಯುತಿರಲಳುಕದಿರು ಮನದೊಳಗೆ
ತಿಳಿಯದುವೆ ಲೋಕದೊಳಗಿನ ಮೂಢತೆ.
ಗುರಿಯು ಮನದೊಳಗಿರಲಿ ಮನವು ಕರ್ಮದೊಳಿರಲಿ
ಕರ್ಮ ಸುಖವನು ಕೊಡಲಿ ಕರ್ಮವಾತು.

೧೬. ಕಲಾವಿದ.

೧

"ಆದಿಕವಿ ಹಾಡಿದಂತೆ,
ನಾವು ಹಾಡೋಣ ಕಾಂತೆ.
ನಮಗೇಕೆ ನೂರು ಚಿಂತೆ ?
ನಾವು ಗಂಧರ್ವರಂತೆ."

"ತುಂಬಿ ಝೇಂಕರಿಸುವುದ ನೋಡು ರಮಣ,
ತಾವರೆಯು ಬೀರುತ್ತಲಿದೆ ನಗೆಯ ಕಿರಣ,
ಅದೊ ನೋಡು ಹೊಳೆಯುವನು ಮೂಡಣರುಣ,
ಈಗ ಹಾಡದಿರೆ ನಿಲದೆನ್ನ ಹರಣ."

"ಲತೆಯೊಡನೆ ಲತೆಯಾಗಿ, ಹೂವೊಡನೆ ಹೂವಾಗಿ,
ಚಿಗುರೊಡನೆ ಚಿಗುರಾಗಿ ಬಾ.
ಸುಗ್ಗಿಯಾ ನವಿಲಂತೆ ಕುಣಿ ಕುಣಿದು ಬಾ.
ಚೆಲುವು ಮೈವೆತ್ತಂತೆ ನನ್ನೆಡೆಗೆ ಬಾ.
ನಲಿಯೋಣ, ಅಲೆಯೋಣ, ಕೆಲೆಯೋಣ ಬಾ.
ನಾನಗುತ, ನೀನಗುತ, ವನವನ್ನೆ ನಗಿಸುತ್ತ
ಮಧುರತೆಯ ಹಾಡನ್ನು ಹಾಡೋಣ ಬಾ.
ಬಾ ಮುದ್ದು ಬಾ, ಬಾ ಬೇಗ ಬಾ
ಹೊಸತೊಂದು ರೂಪವನು ಈ ಬನಕೆ ತಾ."

"ಹಾಡು ಹಾಡು ದೇವಾ
ನೋಡುತ ತವ ಭಾವ
ತಣಿವುದೆನ್ನ ಜೀವಾ
ಇಂತಿಬ್ಬರೂ ಸುಖಿಸುವಾ".

ಈ ನೀರ ನೀರೆಯರು ಬೆರೆತು ಹಾಡುವ ಹಾಡು
ಮೈ ಮರೆಸುತಿದೆ ಜಗದ ಜೀವಿಗಳನೆಲ್ಲ.

ನಿಜವೈರವನು ಮರೆದು ಪುಲ್ಮೇವುಗಳ ತೊರೆದು
ಜಂತುಗಳು ಸಹ ಇಲ್ಲಿಗೈತರುವುವಲ್ಲ
ಇದು ಯಾವ ಮಾಯೆಯೋ, ಕಲೆಯ ಪರಿಪೂರ್ಣತೆಯೊ
ಪ್ರೇಮಗಾನದ ಬಗೆಯ ತಿಳಿದವರೆ ಬಲ್ಲ
ಹಗಲು ಕತ್ತಲೆಯಾಗಿ ಕತ್ತಲೆಯು ಹಗಲಾಗಿ
ಕಾಲವುರುಳುತ್ತಿಹುದು ಇದಕೆ ಅಳಿವಿಲ್ಲ.

೨

"ಚಿಂತೆ ಚಿತೆಯುರಿಯುತಿದೆ ಹೃದಯದಲಿ ದೇವಾ
ಮಡದಿಯಿಲ್ಲದೆಯೆಂತು ಹಿಡಿದಿರಲಿ ಜೀವಾ
ಹಾವು ಕಡಿದೇಕೆ ಸತ್ತಳೊ ನಾನು ಕಾಣೆ
ಗಾನದಿಂಪಿಗೆ ಕಳೆಯನೇರಿಸಿದ ಜಾಣೆ
ಬಾಹಕ್ಕಿ ಕುಳಿತಿಲ್ಲಿ ನುಡಿಸೆನ್ನ ವೀಣೆ
ಬಾರದಿರೆ ನಿನಗಿಟ್ಟ ಚೆಲುಮುತ್ತಿನಾಣೆ"

ದುಃಖಿಸುತಿದೆ ವನವು, ಇವನ
ಶೋಕದಿ ತನ್ಮಯವು.
ಮೌನವಾಗಿ ಅಳುತಿವೆ ಪ್ರಾಣಿಗಳು
ಅರಳದೆ ಇವೆ ಹೂವಿನ ಮೊಗ್ಗೆಗಳು
ತೊರೆಹರಿಯದು ಕಲಕಲನಿನಾದದೊಳು
ಗಾಯಕನಿರೆ ಪತ್ನೀ ಶೋಕದೊಳು
ದುಃಖಿಸುತಿದೆ ವನವು, ಇವನ ಶೋಕದಿ ತನ್ಮಯವು.

ನಡೆವನು ವೀಣೆಸಹಿತ, ಗಾಯಕ, ತನ್ನರಸಿಯನ್ನರಸುತ
ಮಡದಿ ಮಣಿ ಬಳಿಯಿರುವ ತನಕ
ಈ ಲೋಕವವಗೆ ನಾಕ,
ಆ ಮೇಲೆ ದುಃಖ ನರಕ
ಎಲ್ಲೆಲ್ಲು ಮೂಕ ಶೋಕ
ವೀಣೆಯೇ ವಿರಸಪಾಕ. ನಡೆವನು ವೀಣೆ ಸಹಿತ...

೪

"ಆರು ನೀನಾರು ನೀ ಮಾನವ ಶರೀರಿ ?
ಒಳಗೆ ಬಂದೆಯದೆಂತು ಕಾವಲನು ಮೀರಿ ?"
ಮಾತನಾಡಲೊಲ್ಲ, ವೀಣೆಯ ನುಡಿಸುತಲಿಹನಲ್ಲಾ.
ಮನದ ಶೋಕವೊಂದು, ಯಮನನು ಒಲಿಸುವ ಹಟವೊಂದು
ರೌದ್ರದ ಕಠಿನತೆ ಕರಗಿಸಲೆಂದು,
ಹರುಷಕ್ಕಾಗಿಯೆ ನೋಯುವೆನೆಂದು,
ಮಾತನಾಡಲೊಲ್ಲ, ವೀಣೆಯ ನುಡಿಸುತಲಿಹನಲ್ಲಾ.

"ಆನಂದವಾನಂದ ಪೊಂದಿದೆನು ನಾ,
ಪರಮಾನಂದವಾನಂದ ಪೊಂದಿದೆನು ನಾ.
ಕಿವಿಯನು ತಟ್ಟಿತು ಗಾಯನವು.
ನಲಿಯಿತು ಆನಂದದೆ ಮನವು !
ಬೇಡಿದುದ ಕೊಡುವೆನು ನಾ,
ಮನದ ಇಚ್ಛೆಯನು ಕೇಳು ಗಾಯಕನೆ
ಆನಂದವಾನಂದ ಪೊಂದಿದೆನು ನಾ..."

"ಮಡದಿಯ ಕೊಡುದೇವಾ, ಅಥವಾ
ತೆಗೆದುಕೊ ಈ ಜೀವಾ"

"ಮೆಚ್ಚಿದೆ ಓ ಮನುಜಾ, ಈ ನಿಜ
ಪ್ರೀತಿಗೆ ಕವಿರಾಜ.
ಭೂಲೋಕಕೆ ನಡೆ, ಇಹುದೊಂದೇ ತಡೆ
ನಿನ್ನೊಡನೀಕೆಯು ಬರುವಾಗ
ಅಲ್ಲಿಗೆ ತಲಪುವ ತನಕವು ನಿನ್ನವ-
ಳನು ನೋಡದಿರು ಎನುವಾಗ,
ಒಪ್ಪುವೆಯಾ ಮನುಜಾ ?
ಮೆಚ್ಚಿದೆ ಓ ಮನುಜಾ, ಈ ನಿಜ ಪ್ರೀತಿಗೆ ಕವಿರಾಜ."

ದೊರಕಿತು ಆತಗೆ ಭಾಗ್ಯನಿಧಿಯು,
ಮನಸಿನ ದೇವತೆಯು.
ಒಪ್ಪಿಯೆ ಹೊರಟನು. ತಪ್ಪದೆ ನಡೆವನು
ಭೂಮಿಗೆ ಸ್ವರ್ಗವ ತರುತಿಹನು.
ಏತಕೆ ಕಾತರ ? ಏತಕೆ ಆತುರ ?
ಮಾತಿಗೆ ತಪ್ಪಲು ಮಾಯವಾಗಳೆ ?
ಭೂಮಿಗೆ ಸೇರಲು ನಿನ್ನವಳೇ.

೪

"ಏತಕೆ ನೋಡಿದೆಯೋ, ಇನಿಯಾ,
ಪ್ರೀತಿಯ ತಾಳಲಾರದೆಯೋ"
"ಮಾಯವಾದೆಯೋ, ಇನಿಯೆ,
ಜೀವನ ಇಲ್ಲವಾಯಿತೆ ಸವಿಯೆ"

ಗಾಯಕ ನಿಂದಿಹನು, ಗಗನವ, ನೋಡುತ ನಿಂದಿಹನು.



ಮುಂದಿನ ಪುಸ್ತಕಗಳು.

೧. ಇಂಗ್ಲಿಷ್ ಪದ್ಯಗಳು.

Goldsmith: Deserted Village

Morris: Haystack in the floods

Rosseiti: Blessed Damozel

ಇತ್ಯಾದಿ ಕವನಗಳ ಅನುವಾದ.

೨. ಭಾವನಾ ವಿಲಾಸ.